# ಖರೆ ಹೇಳಿ...

ಒಂದು ಹೂ... ಚಿಗುರು... ಮಳೆಹನಿ...
ಎಲ್ಲವೂ ನಿನ್ನ ಮುದ್ದು ನಗು
ಎಂದರೆ ನಂಬುತ್ತಿಲ್ಲ ಆತ
ಅದೆಲ್ಲ ಇರಲಿ
ನಿನ್ನ ಕಿರುಬೆರಳಿನಿಂದ ಒಂದು
ಕುಂಬಳ ಬಳ್ಳಿಯ ಚಿತ್ರ ಬರೆ ನೋಡುವಾ
ಎನ್ನುತ್ತ ಬೆನ್ನು ಕೊಡುತ್ತಾನೆ
ಅಪ್ಪಿಕೊಳ್ಳುವುದೋ ಚಿತ್ರಬರೆಯುವುದೋ
ಯಾವುದು ಮೊದಲು ನೀವು ಹೇಳಿ

ನಾವಿಬ್ಬರು ನಿಮ್ಮ ಹೇಳಿಕೆಯನ್ನು
ಚಾಚೂತಪ್ಪದೆ ಪಾಲಿಸುತ್ತೇವೆ

ಒಂದು ಮುತ್ತಿನಂಥ ಮಳೆಹನಿ ಹಣೆಯ ಮೇಲಿಂದ
ಜಾರಿ ಕೆಳಗಿಳಿವಾಗ ಏನೋ ನೆನಪಾಗಿ ನಾಚಿಕೊಂಡರೆ
ನಗುತ್ತಾನೆ ಕಾರಣ ಹೇಳು ಎಂದು ಸಣ್ಣಗೆ ಕಣ್ಣು ಹೊಡೆದು
ಇಬ್ಬರಿಗೂ ಗೊತ್ತಿರುವ ಗುಟ್ಟನ್ನು ಏನು ಅಂತ ಬಿಡಿಸಿ ಹೇಳುವುದು
ನನಗೆ ಬಿಲ್‌ಕುಲ್ ಸಾಧ್ಯವಿಲ್ಲ

ಒಂದೆರಡಲ್ಲ ಅವನ ಹಕೀಕತ್ತು
ರಾತ್ರಿ ಅವನ ಎದೆಯ ಮೇಲಿಟ್ಟುಕೊಂಡ ಕೈ ಮೆಲ್ಲಗೆ
ಕೆಳಗಿಳಿಸಿ ಮುಂಗೈಯವರೆಗೆ ಮದರಂಗಿ ಚಿತ್ತಾರ
ಬಿಡಿಸಿ ನಾಪತ್ತೆಯಾಗಿದ್ದಾನೆ ಬೆಳಗ್ಗೆ
ರಕ್ತ ಕೆಂಪಿನ ಬಣ್ಣದಿಂದ ಊರೆಲ್ಲ ಬೆಳಕು
ಯಾರಿದು ಯಾರಿದು ಎಂದು ಹುಡುಕಿದರೆ
ಅವನ ತೋರುಬೆರಳು ಹೆಬ್ಬೆರಳು
ಎರಡೂ ರಂಗಾದ ಕೆನ್ನೆ ಹುದುಗಿಸಿ
ನಾವಲ್ಲ ನಾವಲ್ಲ ಎಂದವು